ಗದರಿಸಿದಂತೆ ಸೂಕ್ಷ್ಮ ಹೇಳಿದ. ಆದ್ರ ಬೀರನ ಬಿಸಿರಕ್ತದ ಮುಂದ ದಾನಪ್ಪಂದು ನಡಿಲಿಲ್ಲ. ಆಕಡೆ ಅಂಜುವಿನ ಸೆಡುವಿನ ಮುಂದ ಗೌಡಂದು ನಡಿತಿರಲಿಲ್ಲ. ಈಗ ಇಬ್ಬರ ಕೈಯಲ್ಲಿ ಮೊಬೈಲು ಇರುವುದರಿಂದ ಕೂಡಿಕೆ ದೂರದ ಮಾತಾಗಿ ಚಾಟಿಂಗ್‌ಲ್ಲಿ ಎಲ್ಲಾ ಬಗೆಹರಿಸಿಕೊಳ್ಳುತಿದ್ರು.

ಅಲೈಹಬ್ಬ ಹತ್ತಿರವಾಗತೊಡಗಿತ್ತು. ಈಸಲ ದಾನಪ್ಪನ ಸವಾರಿಗಂತ ಹೊಳಿಯಾಚೆಗಿನ ಊರೋರು ಹತ್ತು ತೊಲಿ ಬಂಗಾರದ ಕಿರೀಟ ಮಾಡಿಸಿ ಭರ್ಜರಿ ಸವಾರಿ ಮಾಡಲು ಮುಂದಾಗಿದ್ರು. ಈಕಡೆ ಈ ವರ್ಸದ ಸವಾರಿಗೆ ಕೆಟ್ಟಹೆಸ್ರು ತರಲು ರಶೀದಸಾಬು ತನ್ನ ಜತಿಗೆ ದೇವ್ರು ಹಿಡಿಯುವ ಕುರುಬರ ಪಕೀರಪ್ಪ, ನಜೀರಸಾಬು, ರಾಜಸಾಬರ ಜತಿಸೇರಿ ಕೆಟ್ಟ ಪಡತಾಲು ಹೂಡಿ, ಮೆಲ್ಲಕ ಹೊಳಿಯಾಚೆಗಿನ ಊರುಗಳೊಂದಿಗೆ ಏನೇನೋ ಸಂಬಂಧ ಬೆಳೆಸಲು ಮುಂದಾಗಿದ್ರು.

ಇನ್ನೂ ಒಂದೆರಡು ತಿಂಗಳು ಅಲೈಹಬ್ಬ ಮುಂದಿತ್ತೇನೊ ಒಂದಿನ ಭರ್ಜರಿ ಮಳೆಬಂದು ಹೊಳಿ ತುಂಬಿತ್ತು. ದಾನಪ್ಪ ಹೊಳಿಕಡೆ ಯಾವುದೋ ಕಾರ್ಯಕ್ರಮದ ನಿಮಿತ್ತ ತುಂಬಿದ ಹೊಳ್ಯಾಗ ಹರಿಗೋಲಿಂದ ದಾಟಿ ಸಂಜಿಮುಂದ ಮತ್ತೆ ದಾಟುವಾಗ ಹರಿಗೋಲು ಸುಳಿಗೆ ಸಿಕ್ಕು ಹೊಳಿ ಪಾಲಾದ. ಅವತ್ತಿನ ದಿನ ರಶೀದಸಾಬನಿಗೆ ಸಂತಸ ಆಗಿದ್ದು ಅಷ್ಟಿಷ್ಟಲ್ಲ. 'ಆಯ್ತುಲೇ ಇನ್ನುಮುಂದ ಈ ದರಿದ್ರ ಸೂಳಿಮಗನ ಕತಿನೂ ಮುಗಿತಿ. ನಮ್ಮಾಟ ಶುರುವಾತು. ಇನ್ಮುಂದ ಊರಾಗ ನಮ್ದೆ ಸವಾರಿಲೇ.. ನೀವೆಲ್ಲಾ ನನ್ ಭಕ್ತರಲೇ.. ನಿಮ್ಗ ಬೇಡಿದ್ದು ಕೊಡಿಸ್ತಿನಿ ಹೆಣ್ಣಂದ್ರ ಹೆಣ್ಣು, ಎಣ್ಣೆಂದ್ರ ಎಣ್ಣಿ.. ಖಂಡಂದ್ರ ಖಂಡ.. ಬೇಕಾದ್ದು ಮಾಡ್ರಿ, ಕೇಳ್ರಿ ಜುಮ್‌ಅನದಂಗ ಕೊಡಸ್ತಿನಿ.. ಹೊಡೇದು ತಿನ್ನದು, ಬೇಕಾದ್ದು ಮಾಡ್ರಿ ಎಲ್ಲಾ ಆಗುತ್ತ.. ನೀವಂದೇ ನನಗ ಸಪೋಟಾಗಿ ನಿಲ್ರಿ.. ಹಿಂದನಿಂತು ನನ್ ಹೊಗಳ್ರಿ, ಪವಾಡಕಟ್ಟಿ ಸುದ್ದಿಮಾಡ್ರಿ.. ಬೇಡಿದ್ದು ಮಾಡ್ತಿನಿ..' ಅಂತ ರಶೀದಸಾಬು ತನ್ನ ಚೇಲಾ ಭಕ್ತಾದಿಗಳಿಗೆ ಹೊಳಿ ದಂಡಿಮ್ಯಾಲ ಹೆಂಡದ ಪಾರ್ಟಿಕೊಟ್ಟು ತನ್ನಕಡೆ ತಿರಗಿಸಿಕೊಳ್ಳತೊಡಗಿದ್ದ. ಈಕಡೆ ಊರುಮಂದಿ ದಾನಪ್ಪಗ ಮಿಡಕಾಡಿ ಹೊಳಿದಂಡೆಲ್ಲಾ ಹುಡುಕಾಡತೊಡಗಿದ್ರು. ಎಲ್ಲೋ ಜಾಲಿ ಪೊದ್ಯಾಗ ಹೆಣ ಸಿಕ್ಕಮ್ಯಾಲ ಅತ್ತುಕರೆದು ದರ್ಗಾದ ಮುಂದನೇ ಮಣ್ಣುಮಾಡಿದ್ರು. ಸತ್ತು ತಿಂಗಳಾದಮೇಲೆ ಪಟ್ಟಿಗಿಟ್ಟಿಮಾಡಿ ಸಣ್ಣ ಸಮಾಧಿ ಕಟ್ಟಿಸಿ, ಸಮಾಧಿಮುಂದ ಹೂವಿನ ತೋಟ ಮಾಡಿದ್ರು. ಇದರಿಂದ ದಾನಪ್ಪನ ದೇವ್ರಿಗೆ ಇನ್ನಷ್ಟು ಭಕ್ತರು ಹೆಚ್ಚಾಗತೊಡಗಿದ್ರು. ಬೀರನಿಗೆ ದೇವ್ರು ಪಟ್ಟಾ ಕಟ್ಟಲು ತಾವೇ ದೈವದ ಮಾತಾಡಿ ನಿರ್ಧರಿಸಿಕೊಂಡಿದ್ರು. ಆದ್ರ ರಶೀದಸಾಬು 'ಅದ್ಯಾವನಲೇ ದೇವ್ರು ಪಟ್ಟಾ ಮಗನಿಗೆ ಕೊಡ್ತೋನು.. ದೇವ್ರಂದ್ರ ಸರ್ಕಾರ ಮಾಡಿರೇನು.. ಅಪ್ಪನ ಕೆಲ್ಸ ಮಗನಿಗೆ ಕದ್ದು ಕೊಟ್ಟಂಗ.. ಪಟ್ಟಕ ಇತಿಮಿತಿನೂ ಇಲ್ಲನೂ.. ದೇವ್ರಂದ್ರ ಹುಡುಗಾಟ ಮಾಡಿರೇನು ಕಂಡಕಂಡೋರಿಗೆ ಕೊಡದು, ಕಂಡಕಂಡವರಿಗೆ ಒಪ್ಪಿಸದು.. ದೇವ್ರಂದ್ರ ಬೇಕಂದಾಗ ತಗಳ್ಳದು, ಕಸಗನ್ನದು ಅಲ್ಲ. ನಮ್ಗ ಒಲ್ದು ಬರಬೇಕು. ತಪಸ್ಸುಮಾಡಿ, ಪೂಜೆ, ಪುನಸ್ಕಾರ, ಹರಿಕಿಪರಿಕಿ ಮಾಡಿದ್ರನ ಸಿಗೋದು.. ದೇವ್ರಂದ್ರ ಹಂಗ ಸಿಗಲ್ಲ. ಅದಕ್ಕ ತಕ್ಕಂಗ ದುಡಿಬೇಕು, ನೆಟ್ಟಗ ಇರಬೇಕು.. ಹೆಣ್ಣಿನ ಸಂಗ ಇರಬಾರದು, ಕದಿಯದು, ಕುಡೇದು, ತಿನ್ನದಂತ ಕೆಟ್ಟಚಟ ಇರಬಾರ್ದು.. ಅಂತದ್ರಾಗ ಬೀರಗ ಅಂತ ಒಳ್ಳೆಗುಣ ಯಾವಿಲ್ಲ.. ಅವನಿಗೆ ಐದು ಬೆಳ್ಳು ಸಮಿಲ್ಲ. ಕಿರುಬೆಳ್ಳು ಮುಕ್ಕಾಗೈತಿ.. ಬೇಕಾದ್ರ ಕಣ್ಣುಬಿಟ್ಟು ನೋಡ್ರಿ.. ಇಂಥವ್ರಿಗೆ ದೇವ್ರು ಒಪ್ಪುಸಾಕ ಬರಲ್ಲ.. ಬೇಕಾದ್ರ ನಾಕು ಊರಾಗ ಕೇಳಿನೋಡ್ರಿ.. ತಂದಿ ಹೆಸ್ರು ಮಾಡ್ಯಾರಂತ ಮಗನಿಗೆ ದೇವ್ರು ಕೊಡಾಕ ಬರಲ್ಲ..' ಅಂತ ರಶೀದಸಾಬು ತನ್ ಜತೆ ದೇವ್ರು ಹಿಡಿಯುವವರನ್ನು ಮುಂದ ಕೂರಿಸಿಕೊಂಡು ಇಷ್ಟುದ್ದ ಹೇಳಿದ. ಈಗ ದಾನಪ್ಪನ ಭಕ್ತಾದಿಗಳು ಸುಮ್ಮನಾಗಿ ಏನುಮಾಡದ ಸ್ಥಿತಿಯಲ್ಲಾದ್ರು. ಅಲ್ಲೇ ಇದ್ದ ಬೀರ ಏನೂ ಹೇಳದೆ ಮೌನವಾಗಿ ದೈವದ ಮುಂದ ಎದ್ದು ಮನೆಸೇರಿದ್ದ.

ಈಕಡೆ ಅಂಜು ಬೀರನ ಜತೆ ಕೂಡೋದು, ಭೇಟಿಯಾಗೋದು ಬಿಟ್ಟು ಹಗಲನ್ನೆರಡು ತಾಸು ಚಾಟಿಂಗ್‌ಲ್ಲಿ ಸುಖಾಸುಮ್ಮನೆ ಕಾಲ ಕಳೆಯತೊಡಗಿದ್ಲು. ಅಂಜುವಿನ ಮೊಬೈಲ್ ಕಿರಿಕಿರಿಗೆ ಬೇಸತ್ತ ಅಪ್ಪ ಅಲ್ಲಿಲ್ಲಿ ವರ ಬರಲು ಹೇಳಿದ. ಅಂಜುನ ನೋಡಲು ವರಗಳು ಬಂದುಹೋಗಲು ಮುಂದಾದ್ವು. ಹತ್ತಾರು ವರಗಳು ಈಗಾಗಲೇ ಪೈಪೋಟಿಮ್ಯಾಲ ಹೂಹಣ್ಣು ಇಟ್ಟುಹೋಗಿದ್ವು. ಆದ್ರ ಅವರಿಗೆ ಇಷ್ಟಾದ್ರ ಇವರಿಗೆ